## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

## S.C. No. 140/2024

| ಸಾಕ್ಷಿಯ ಹೆಸರು | ಶ್ರೀ. ರಾಜು | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ತಿಮ್ಮರಾಜು | 1 | 1 |
| ವಯಸ್ಸು | 33 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **10.02.2026.** | |
| ಉದ್ಯೋಗ | ಚಾಲಕ | | |
| ವಾಸ ಸ್ಥಳ | ಟಿ.ಬೇಗೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ನನಗೆ ಯಾವುದೇ ಗಾಯವಾಗಿರಲಿಲ್ಲ. ನಾನು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ನಾನು ಪೋಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ. ಈಗ ನನಗೆ ತೋರಿಸಿದ ದೂರಿನಲ್ಲಿ ನನ್ನ ಸಹಿ ಇದ್ದು ಅದನ್ನು ನಿಶಾನೆ.ಪಿ. 1 ಎಂತಲೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಎ) ಎಂದು ಗುರುತಿಸಲಾಯಿತು. ಸುಮಾರು 7 ವರ್ಷಗಳ ಹಿಂದೆ ನಮ್ಮ ಅಂಗಡಿಯ ಮಂದೆ ಆಗಿದ್ದ ಅಪಘಾತಕ್ಕೆ ಸಂಬಂಧ ಪಟ್ಟಂತೆ ನಿಶಾನೆ.ಪಿ. 1 ಕ್ಕೆ ಸಹಿ ಮಾಡಿದ್ದೇನೆ. ನಾನು ಪೊಲೀಸರಿಗೆ ಯಾವುದೇ ಮುಂದುವರಿದ ಹೇಳಿಕೆ ನೀಡಿಲ್ಲ. ಶ್ರೀನಿವಾಸ್ ನನ್ನ ಸಹೋದರ. ಅವರು ಬದುಕಿದ್ದಾಗ ಕೋಳಿ ಅಂಗಡಿ ಇಟ್ಟುಕೊಂಡಿದ್ದು ಕಳೆದ ವರ್ಷ ಮೃತಪಟ್ಟಿದ್ದಾರೆ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 08.01.2017 ರಂದು ಟಿ. ಬೇಗೂರಿನಲ್ಲಿ ನನ್ನ ಸ್ನೇಹಿತ ಹಷಿರ್ತ್ ಮೃತಪಟ್ಟಿದ್ದು ಆತನ ಮಣ್ಣಿನ ಕಾರ್ಯಕ್ರಮಕ್ಕೆ ನಾನು ಮತ್ತು ನಿರಂಜನ್ ಹೋಗಿ ಕಾರ್ಯ ಮುಗಿಸಿಕೊಂಡು ಪಲ್ಸರ್ ಬೈಕ್ ನಲ್ಲಿ

ಬರುತ್ತಿದ್ದಾಗ ಸುಮಾರು 5.30 ಕ್ಕೆ ರೆಸಿಡೆನ್ಸಿ ಕ್ಲಬ್ ಹಿಂಭಾಗ ದಾಲ್ಮೀಯಾ ಲೇಔಟ್ ನಲ್ಲಿ 15 ಜನ ಹುಟ್ಟಿದ ಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾಗ ಮತ್ತು ಅವರುಗಳನ್ನು ನಮ್ಮನ್ನು ನೋಡಿ ಬಾರೋ ಕೇಕ್ ತಿನ್ನಿರಿ ಎಂದು ಕರೆದರು ಎಂದರೆ ಸರಿ ಅಲ್ಲ. ನಾವಿಬ್ಬರೂ ಅಲ್ಲಿ ಹೋದಾಗ ಅವರು ಕೇಕ್ ಕೊಟ್ಟಿದ್ದು ನಾವು ತಿಂದ ನಂತರ ಅವರವರೆ ಗಲಾಟೆ ಮಾಡಿಕೊಂಡಿದ್ದು ನಿರಂಜನ್ ಬಾಬುಗೂ ಬೈದರು ಎಂದರೆ ಸರಿ ಅಲ್ಲ. ಆತನಿಗೆ ಹೊಡೆಯ ಹೋದಾಗ ನಾನು ಬಿಡಿಸಿದ್ದು ನಂತರ 3 ಜನರು ನೀನು ಯಾರೋ ಕೇಳಲು ಎಂದು ಬೈದರು ನನಗೆ ಕೈಗಳಿಂದ ಹೊಡೆದು ಅಲ್ಲೇ ಇದ್ದಕ ಾರಿನಲ್ಲಿ ಹಾಕಿಕೊಂಡು ಕೊಲೆ ಮಾಡುವ ಉದ್ದೇಶದಿಂದ ಒಂದು ಗತಿ ಕಾಣಿಸುತ್ತೇವೆ ಎಂದು ನನ್ನ ಅಕ್ಕ ಪಕ್ಕ ಕುಳಿತುಕೊಂಡು ಮತ್ತೂಬ್ಬ ಕಾರನ್ನು ಚಾಲನೆ ಮಾಡಿಕೊಂಡು ಹೋಗುವಾಗ ನನಗೆ ಹೊಡೆದರು ಎಂದರೆ ಸರಿ ಅಲ್ಲ. ನನ್ನನ್ನು ಕಾರಿನಲ್ಲಿ ಸುತ್ತಾಡಿಸಿ ದೊಣ್ಣೆ, ರಾಡ್ ಮತ್ತು ಕೈಗಳಿಂದ ಹೊಡೆದರು ಎಂದರೆ ಸರಿ ಅಅಲ್ಲ. ನಾನು ಕಿರುಚಾಡಿದ್ದರಿಂದ ರಾತ್ರಿ 8.30 ಕ್ಕೆ ಸೊಂಡೇಕೊಪ್ಪ ಗ್ರಾಮದ ಅಶ್ವಥ ಕಟ್ಟೆಯ ಬಳಿ ಕಾರಿನಲ್ಲಿ ನನ್ನನ್ನು ಕೆಳಗೆ ತಳಿದ್ದರು ಎಂದರೆ ಸರಿ ಅಲ್ಲ. ನಂತರ ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದು ಈ ಬಗ್ಗೆ ಪೊಲೀಸರಿಗೆ ನಿಶಾನೆ.ಪಿ. 1 ರಂತೆ ದೂರನ್ನು ನೀಡಿದ್ದೇನೆ ಎಂದರೆ ಸರಿ ಅಲ್ಲ. ದಿನಾಂಕ 30.01.2018 ರಂದು ಪೊಲೀಸರಿಗೆ ಮುಂದುವರಿದ ಹೇಳಿಕೆ ನೀಡಿದೆ ಎಂದರೆ ಸರಿ ಅಲ್ಲ. ಅದನ್ನು ನಿಶಾನೆ.ಪಿ. 2 ಎಂದು ಗುರುತಿಸಲಾಯಿತು. ದಿನಾಂಕ 12.02.2018, 14.02.2018 ಮತ್ತು 01.07.2018 ರಂದು ಆರೋಪಿ ನಂ. 1 ರಿಂದ 3 ರವರನ್ನು ಗುರುತಿಸಿ ಈ ಬಗ್ಗೆ ಮುಂದುವರಿದ ಹೇಳಿಕೆಗಳನ್ನು ನೀಡಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಹೇಳಿಕೆಗಳನ್ನು ನಿಶಾನೆ.ಪಿ. 3 ರಿಂದ 5 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ : ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.